# KARNATAKA STATE ROAD TRANSPORT CORPORATION

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ Kempegowda Bus Station:: ಕೆಂಪೇಗೌಡ ಬಸ್ ನಿಲ್ದಾಣ

ಸಂ: ಕರಾಸಾ: ವಿನಿ: ಕೆಂಬನಿ: ವಾ–1/921/2018–19 ದಿನಾಂಕ: 04/12/2018

## ಟೆಂಡರ್ ಪ್ರಕಟಣೆ ಸಂಖ್ಯೆ:04/2018–19
## (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣ, ಬೆಂಗಳೂರು ಇಲ್ಲಿ ತೆರವಾಗಿರುವ / ತೆರವಾಗಲಿರುವ ಕಟ್ಟಿದ/ತೆರೆದ ಸ್ಥಳದಲ್ಲಿರುವ ಮಳಿಗೆಗಳಿಗೆ ಹಾಗೂ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಮೂರು ವರ್ಷ / ಐದು ವರ್ಷ ಅವಧಿಗೆ "ಹೇಗಿದೆಯೋ ಹಾಗೆ" ಷರತ್ತಿನೊಂದಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಏರ್ಪಡಿಸಲಾಗಿದೆ. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರದ ಸ್ಟಾಂಪ್ ಕಾಯಿದೆ ಅನ್ವಯ ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು ಹಾಗೂ ಪರವಾನಗಿ ಶುಲ್ಕದ ಮೇಲೆ ಸರ್ಕಾರ ನಿಗಧಿಪಡಿಸಿರುವ ಜಿ.ಎಸ್.ಟಿ. ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಮಾಸಿಕ ಪರವಾನಗಿ ಶುಲ್ಕದ ಮೇಲೆ ವಾರ್ಷಿಕ ಶೇಕಡ.10 ರಷ್ಟು ಹೆಚ್ಚುವರಿ ಶುಲ್ಕ ಪಾವತಿಸತಕ್ಕದ್ದು.

'ಅರ್ಜಿದಾರರು ಸಂಬಂಧಿಸಿದ ಮಳಿಗೆಗಳ ಅರ್ಜಿ ಶುಲ್ಕ/ಇ.ಎಮ್.ಡಿ ಮೊತ್ತವನ್ನು Divisional Controller, KSRTC, Kempegowda Bus Station, Bengaluru-560009 ರವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಮೂಲಕ ಪಡೆದು, ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟಿನಲ್ಲಿ ಅರ್ಜಿ ಸಲ್ಲಿಸಿದ ನಂತರ <u>"ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ"</u> ಅರ್ಜಿ ಶುಲ್ಕ ಮತ್ತು ಇ.ಎಂ.ಡಿ ಮೊತ್ತದ ಡಿಡಿಯನ್ನು ಕೆಂಪೇಗೌಡ ಬಸ್ ನಿಲ್ದಾಣ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆನ್‌ಲೈನ್ ಅರ್ಜಿಯನ್ನು ತಿರಸ್ಕರಿಸಲಾಗುವುದು.'

ಬಿಡ್ಡುದಾರರು ಕೆಳಕಂಡ ಪಟ್ಟಿಯಲ್ಲಿ ತೋರಿಸಿರುವಂತೆ ನಿಗಧಿತ ಇ.ಎಮ್.ಡಿ ಮೊತ್ತದಲ್ಲಿ ₹ 500/– ಗಳನ್ನು e-portal ಮುಖೇನ ಪಾವತಿಸುವುದು. ಇನ್ನುಳಿದ ಇ.ಎಮ್.ಡಿ ಮೊತ್ತವನ್ನು ಡಿ.ಡಿ.ರೂಪದಲ್ಲಿ ಪಡೆದು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು. ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ–ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡುವುದು.

## ಇ–ಟೆಂಡರು ವಿವರಗಳು

### ಕೆಂಪೇಗೌಡ ಬಸ್ ನಿಲ್ದಾಣ–ಟರ್ಮಿನಲ್–01 ಮತ್ತು 03

| ಕ್ರ ಸಂ | ವಾಣಿಜ್ಯ ಮಳಿಗೆ ಸಂಖ್ಯೆ ಮತ್ತು ಹೆಸರು | ವಿಸ್ತೀರ್ಣ ಚದರಡಿಗಳಲ್ಲಿ | ಅವಧಿ (ವರ್ಷಗಳಲ್ಲಿ) | ಮಾಸಿಕ ಮಿತವ್ಯಯ ಶುಲ್ಕ (₹) | ಇಎಂಡಿ(ರೂಗಳಲ್ಲಿ) | | ಅರ್ಜಿ ಶುಲ್ಕ ಜಿ.ಎಸ್.ಟಿ ಸೇರಿ ಡಿ.ಡಿ. ಮೂಲಕ ₹ |
|---|---|---|---|---|---|---|---|
| | | | | | ಇ–ಪ್ರೊಕ್ಯೂರ್‌ಮೆಂಟ್ ಮೂಲಕ (₹) | ಡಿ.ಡಿ. ಮೂಲಕ(₹) | |
| 1 | ಮಳಿಗೆ ಸಂಖ್ಯೆ–123, ಟರ್ಮಿನಲ್–1, (ಉಪಾಹಾರ ಗೃಹ) ತೆರೆದ ಸ್ಥಳ, ಮಳಿಗೆ ಖಾಲಿ ಇದೆ. ಮೂರನೇ ಬಾರಿ ಟೆಂಡರ್. | 480 | 3 | 462489 | 500/- | 13,86,967/- | 3000+540 =3540 |
| 2 | ಮಳಿಗೆ ಸಂಖ್ಯೆ–46, ಟರ್ಮಿನಲ್–1, ಕಟ್ಟಿದ ಮಳಿಗೆ, ಸಾಮಾನ್ಯ ಮಳಿಗೆ, ಮಳಿಗೆಯು ಖಾಲಿ ಇದೆ. ಎರಡನೇ ಬಾರಿ ಟೆಂಡರು. | 103.82 | 5 | 16940/- | 500/- | 50,320/- | 170+31= 201 |
| 3 | ಮಳಿಗೆ ಸಂಖ್ಯೆ–47, ಟರ್ಮಿನಲ್–1, ಕಟ್ಟಿದ ಮಳಿಗೆ , ಸಾಮಾನ್ಯ ಮಳಿಗೆ, ಮಳಿಗೆಯು ಖಾಲಿ ಇದೆ. ಎರಡನೇ ಬಾರಿ ಟೆಂಡರು. | 103.82 | 5 | 16335/- | 500/- | 48,505/- | 163+29 =192 |
| 4 | ದ್ವಿಚಕ್ರವಾಹನ ನಿಲ್ದಾಣ ತೆರೆದ ಸ್ಥಳ, ಶಾಂತಲಾ ಸಿಲ್ಕ್ ಹೌಸ್ ಎದುರು, ಖಾಲಿ ಇದೆ. ಟರ್ಮಿನಲ್–3 ಮೊದಲನೇ ಬಾರಿ ಟೆಂಡರು (ನಕ್ಷೆ ಲಗತ್ತಿಸಿದೆ. ನಕ್ಷೆಯ ಭಾಗ 2 ನ್ನು ಪರಿಗಣಿಸುವುದು) | 2409 | 3 | 79,497/- | 500/- | 2,37,891/- | 795+143 =938 |

### ಮೈಸೂರು ರಸ್ತೆ ಬಸ್ ನಿಲ್ದಾಣ

| ಕ್ರ ಸಂ | ವಾಣಿಜ್ಯ ಮಳಿಗೆ ಸಂಖ್ಯೆ ಮತ್ತು ಹೆಸರು | ವಿಸ್ತೀರ್ಣ ಚದರಡಿಗಳಲ್ಲಿ | ಅವಧಿ (ವರ್ಷಗಳಲ್ಲಿ) | ಮಾಸಿಕ ಮಿತವ್ಯಯ ಶುಲ್ಕ (₹) | ಇಎಂಡಿ (ರೂ.ಗಳಲ್ಲಿ) | | ಅರ್ಜಿ ಶುಲ್ಕ ಜಿ.ಎಸ್.ಟಿ ಸೇರಿ ಡಿ.ಡಿ. ಮೂಲಕ (₹) |
|---|---|---|---|---|---|---|---|
| | | | | | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ₹ | ಡಿ.ಡಿ. ಮೂಲಕ(₹) | |
| 5 | ಮಳಿಗೆ ಸಂಖ್ಯೆ–09, ಸಾಮಾನ್ಯ ಮಳಿಗೆ, ಕಟ್ಟಿದ ಮಳಿಗೆ, ಮಳಿಗೆ ಖಾಲಿ ಇದೆ. (ಎರಡನೇ ಬಾರಿ ಟೆಂಡರು) | 83.25 | 5 | 3,663 | 500/- | 10489/- | 100+18= 118 |
| 6 | ಮಳಿಗೆ ಸಂಖ್ಯೆ–13 ಸಾಮಾನ್ಯ ಮಳಿಗೆ, ಕಟ್ಟಿದ ಮಳಿಗೆ, ಮಳಿಗೆಯು ಖಾಲಿ ಇದೆ. (ಮೊದಲನೇ ಬಾರಿ ಟೆಂಡರ್) | 80.84 | 5 | 3903/- | 500/- | 11,209/- | 100+18= 118 |
| 7 | ಮಳಿಗೆ ಸಂಖ್ಯೆ–15 ಸಾಮಾನ್ಯ ಮಳಿಗೆ, ಕಟ್ಟಿದ ಮಳಿಗೆ, ಮಳಿಗೆಯು ಖಾಲಿ ಇದೆ. (ಮೂರನೇ ಬಾರಿ ಟೆಂಡರ್) | 87.19 | 5 | 4,070/- | 500/- | 11,710/- | 100+18= 118 |

## ಸೂಚನೆ

1. ಮಳಿಗೆಗಳನ್ನು ಬಿಡ್ದುದಾರರು ಬಿಡ್ಡು ಮೊತ್ತ ನಮೂದಿಸುವ ಮೊದಲು ಸ್ಥಳವನ್ನು ಖುದ್ದಾಗಿ ಪರಿಶೀಲಿಸುವುದು. ಸದರಿ ಮಳಿಗೆಯು "ಈಗ ಹೇಗಿದಿಯೋ ಹಾಗೆಯೇ" ಎಂಬ ಆಧಾರದ ಮೇಲೆ ಷರತ್ತಿಗೊಳಗಾಗಿರುತ್ತದೆ. ಮಳಿಗೆಯಲ್ಲಿ ಯಾವುದೇ ಕಾಮಗಾರಿ/ಮಾರ್ಪಡು ಕೈಗೊಳ್ಳಬೇಕಿದ್ದಲ್ಲಿ, ನಿಗಮದ ಪೂರ್ವಾನುಮತಿ ಪಡೆದು ನಿಗಮದ ಅಭಿಯಂತರರವರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಬೇಕಿರುತ್ತದೆ
2. ದ್ವಿಚಕ್ರ ವಾಹನ ನಿಲುಗಡೆ ಶುಲ್ಕ:

ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರವಾನಗಿದಾರರು ಈ ಕೆಳಕಂಡಂತೆ ನಿಲುಗಡೆ ಶುಲ್ಕ ವಿಧಿಸಬೇಕಿರುತ್ತದೆ.

ಕೆಂಪೇಗೌಡ ಬಸ್ ನಿಲ್ದಾಣಲ್ಲಿನ ಪಾರ್ಕಿಂಗ್ ದರಗಳು:

| ವಾಹನದ ವಿಧ | ದರ (ರೂ.ಗಳಲ್ಲಿ) | | | | | | |
|---|---|---|---|---|---|---|---|
| ಸಮಯ (ಗಂಟೆಗಳಲ್ಲಿ) | 0-1 | 1-2 | 2-4 | 4-10 | 10-16 | 16-24 | 24 ಗಂಟೆ ಮೇಲ್ಪಟ್ಟು |
| ಸೈಕಲ್/ಸ್ಕೂಟರ್ / ದ್ವಿಚಕ್ರ ವಾಹನ | 5 | 10 | 20 | 30 | 40 | 50 | ಪ್ರತಿ ದಿನಕ್ಕೆ ರೂ.100/- |

ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ / ನಿಬಂಧನೆಗಳು ಈ ಪರವಾನಗಿದಾರರಿಗೂ ಅನ್ವಯವಾಗುತ್ತವೆ.

ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಮೀಸಲಾತಿ ಬಯಸುವ ಬಿಡ್ದುದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್ ನಲ್ಲಿ ಅಪ್ ಲೋಡ್ ಮಾಡುವುದು. ಸರ್ಕಾರದಿಂದ ಕಾಲಕಾಲಕ್ಕೆ ವಿಧಿಸಲಾಗುವ ಸಂಬಂಧಪಟ್ಟ ತೆರಿಗೆಗಳು ಅನ್ವಯವಾಗುತ್ತವೆ. ಸಂಸ್ಥೆಯ ಕಪ್ಪು ಪಟ್ಟಿಯಲ್ಲಿರುವ ಪರವಾನಿಗೆದಾರರು ಇ-ಟೆಂಡರಿನಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ ಭಾಗವಹಿಸಿದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು. **ದಿನಾಂಕ: 28/12/2018** ರಂದು ಸಮಯ **17.00** ಗಂಟೆಯೊಳಗೆ ನಿಗದಿತ ಇ.ಎಂ.ಡಿ ಮೊತ್ತದ ಡಿಡಿಯನ್ನು ಇತರೆ ದಾಖಲಾತಿಗಳೊಂದಿಗೆ ಕೆಂಪೇಗೌಡ ಬಸ್ ನಿಲ್ದಾಣ, ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು.

ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಷರತ್ತು ನಿಬಂಧನೆಗಳು ಟೆಂಡರ್ ಪ್ರಕ್ರಿಯೆಯ ಭಾಗವಾಗಿದೆ. *ಹೆಚ್ಚಿನ ವಿವರಗಳಿಗಾಗಿ* http:// www.eproc.karnataka.gov.in ವೆಬ್ ಸೈಟ್‌ನ್ನು ವೀಕ್ಷಿಸಬಹುದಾಗಿದೆ ಹಾಗೂ *ವಿಭಾಗೀಯ ನಿಯಂತ್ರಣಾಧಿಕಾರಿ ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.* ಅರ್ಜಿಗಳನ್ನು ತಿರಸ್ಕರಿಸುವ, ಪುರಸ್ಕರಿಸುವ ಅಥವಾ ಮಾರ್ಪಾಡಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗೆ 7760990554/7760960049ಗೆ ಸಂಪರ್ಕಿಸುವುದು.

ಇ-ಟೆಂಡರಿನಲ್ಲಿ ಭಾಗವಹಿಸುವವರು ದಿನಾಂಕ:06/12/2018 ರಿಂದ 26/12/2018 ರ ಸಮಯ 16.00 ಗಂಟೆವರೆಗೆ http:// www.eproc.karnataka.gov.in ಅಂತರ್ಜಾಲದ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. online ಮೂಲಕ ಟೆಂಡರನ್ನು ದಿನಾಂಕ29/12/2018ರಂದು **11.00** ಗಂಟೆಗೆ ತೆರೆಯಲಾಗುವುದು, (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ)

-ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು.

ಪ್ರತಿಯನ್ನು:

ಗೌ. ಪೂ: 1. ಆಪ್ತ ಕಾರ್ಯದರ್ಶಿಗಳು, ನಿರ್ದೇಶಕರು (ಭ ಮತ್ತು ಜಾ) ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರ ಗಮನಕ್ಕೆ ತರಲು ಕೋರಲಾಗಿದೆ.

2. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿಗಮದ ಅಂತರ್‌ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕಳುಹಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು